# ನಾಗರಪಂಚಮಿ ನಿಮಿತ್ತ ಶಾಲಾಮಕ್ಕಳಿಗೆ ಹಾಲು-ಹಣ್ಣು ವಿತರಣೆ

ಚಿತ್ರದುರ್ಗ ಆ. 12 – ನಾಡಿನಾದ್ಯಂತ ನಾಗರಪಂಚಮಿ ಆಚರಿಸಲಾಗುತ್ತಿದೆ. ಹುತ್ತದ ಹತ್ತಿರ ಹೋಗಿ ಹಾಲನ್ನು ಎರಯುವ ಸಂದರ್ಭ ಇದೆ. ಹುತ್ತ ಅಥವಾ ಹಾವು ಹಾಲು ಕುಡಿಯುವುದಿಲ್ಲ. ಹಾಲು ಹಾವಿನ ಆಹಾರ ಅಲ್ಲ. ಇದೊಂದು ಅವೈಜ್ಞಾನಿಕ ಕ್ರಮವಾಗಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ನಗರದ ಬುರುಜನಹಟ್ಟಿಯ ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಮಕ್ಕಳಿಗೆ ನಾಗರಪಂಚಮಿ ನಿಮಿತ್ತ ಹಾಲು-ಹಣ್ಣುವಿತರಣೆ ಮಾಡಿ ಶ್ರೀಗಳು ಮಾತನಾಡಿದರು.

ಶ್ರೀಮಠವು ಕಳೆದ ಎರಡು ದಶಕಗಳಿಂದ ನಾಗರಪಂಚಮಿ ಸಂದರ್ಭದಲ್ಲಿ ಪೌಷ್ಠಿಕತೆ ಹೊಂದಿರುವ ಹಾಲು ಮತ್ತಿತರ ಪದಾರ್ಥಗಳನ್ನು ದೇವರ ಹೆಸರಿನಲ್ಲಿ ಅಪವ್ಯಯ ಮಾಡುವುದು ಮೂಢನಂಬಿಕೆಯಾಗಿದ್ದು, ಅವನ್ನು ಅನಾಥ, ಅಬಲರು, ಆಸ್ಪತ್ರೆ ರೋಗಿಗಳಿಗೆ, ಶಾಲಾಮಕ್ಕಳಿಗೆ ವಿತರಿಸುವ ಮೂಲಕ ಶ್ರೀಮಠವು ಬಸವ ಪಂಚಮಿಯನ್ನಾಗಿ ಆಚರಿಸುತ್ತ ವಿಧಾಯಕ ಕಾರ್ಯಕ್ರಮವನ್ನಾಗಿಸಲಾಗಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಚನ್ನಗಿರಿ ಹಾಲಸ್ವಾಮಿ ವಿರಕ್ತಮಠದ ಡಾ. ಶ್ರೀ ಬಸವಜಯಚಂದ್ರ ಸ್ವಾಮಿಗಳು, ಕಾಂಗ್ರೆಸ್ ಮುಖಂಡ ಹನುಮಲಿ ಷಣ್ಮುಖಪ್ಪ, ನಗರಸಭೆ ಮಾಜಿ ಅಧ್ಯಕ್ಷ ಎನ್.ಮಂಜಪ್ಪ, ಶಿಕ್ಷಣಾಧಿಕಾರಿ ತಿಪ್ಪೇಸ್ವಾಮಿ ಮುಖ್ಯೋಪಾಧ್ಯಾಯ ಮೂಡಲಗಿರಿಯಪ್ಪ, ಸಿಪಿಐ ಕಾರ್ಯದರ್ಶಿ ಸುರೇಶ್‌ಬಾಬು ಇದ್ದರು.

